**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ಇವರು ನಿಯಮ-330ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಉತ್ತರ.**

**ವಿಷಯ:**

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಆರೋಗ್ಯ ಮತ್ತು ಸ್ವಚ್ಛತೆ ಕ್ಷೇತ್ರಗಳಲ್ಲಿ ಕೊಪ್ಪಳ ಜಿಲ್ಲೆಯು ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲೊಂದು ಎಂಬುದು ದುಃಖದ ವಿಷಯವಾಗಿದೆ. ಈ ಜಿಲ್ಲೆಯಲ್ಲಿ ಆರೋಗ್ಯ ಸೇವೆಗಳ ಕೊರತೆ, ವೈದ್ಯಕೀಯ ಸೌಲಭ್ಯಗಳ ಅನುಪಾತ ಮತ್ತು ಆರೋಗ್ಯ ಮೂಲಸೌಕರ್ಯಗಳ ಲಭ್ಯತೆಯು ತೀರಾ ಅಲ್ಪವಾಗಿದೆ. ಕೊಪ್ಪಳ ಜಿಲ್ಲೆಯವರು ಸದ್ಯ ವೈದ್ಯಕೀಯ ಚಿಕಿತ್ಸೆಗೆ ಹುಬ್ಬಳ್ಳಿ, ಧಾರವಾಡ, ದಾವಣಗೆರೆ, ಬೆಳಗಾವಿ ಮತ್ತು ವಿಜಯಪುರದಂತಹ ದೂರದ ನಗರಗಳಿಗೆ ಹೋಗಬೇಕಾಗುತ್ತದೆ. ಇದು ಅವರ ಆರ್ಥಿಕ ಮತ್ತು ಮಾನಸಿಕ ಸ್ಥಿತಿಗೆ ದೊಡ್ಡ ಹೊರೆ ಆಗಿದೆ.

ಇಂತಹ ಹಿನ್ನೆಲೆ ಇರುವಾಗ ಕೊಪ್ಪಳ ಜಿಲ್ಲೆಯಲ್ಲಿ ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನೂತನ 450 ಹಾಸಿಗೆಗಳ ಜಿಲ್ಲಾ ಭೋದಕರ ಆಸ್ಪತ್ರೆಯನ್ನು ಪ್ರಾರಂಭ ಮಾಡುವಲ್ಲಿ ಆಗುತ್ತಿರುವ ವಿಳಂಬವು ಅತ್ಯಂತ ವಿಪರೀತ ಮತ್ತು ಈ ಭಾಗದ ಜನತೆಗೆ ಅನ್ಯಾಯದ ಸಂಗತಿಯಾಗಿದೆ. ಈ ಜಿಲ್ಲೆಗೆ ಈ ರೀತಿಯ ಉನ್ನತ ಮಟ್ಟದ ವೈದ್ಯಕೀಯ ಸಂಸ್ಥೆಯ ಅವಶ್ಯಕತೆ ಇರುತ್ತದೆ.

ಕಿಮ್ಸ್ ಆಸ್ಪತ್ರೆ ಪ್ರಾರಂಭವಾಗುವುದು ಒಂದು ಕಟ್ಟಡದ ಉದ್ಘಾಟನೆ ಅಲ್ಲ, ಅದು ಸಾವಿರಾರು ಜನರ ಆರೋಗ್ಯದ ಆಶಾಕಿರಣವಾಗಿದೆ ಎಂಬ ವಿಷಯದ ಕುರಿತು.

**ಉತ್ತರ:**

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ಪ್ರಾರಂಭವಾಗಿ ಒಂದು ದಶಮಾನವನ್ನು ಪೂರೈಸಿದ್ದು, ಕಲ್ಯಾಣ ಕರ್ನಾಟಕದ ಕೊಪ್ಪಳ ಜಿಲ್ಲೆ ಹಾಗೂ ಸುತ್ತಮುತ್ತಲಿನ ಜನರಿಗೆ ವೈದ್ಯಕೀಯ ಶಿಕ್ಷಣ ಮತ್ತು ಉತ್ತಮ ಆರೋಗ್ಯ ಸೇವೆಗಳನ್ನು ಪೂರೈಸುತ್ತಾ ಬಂದಿರುತ್ತದೆ. ಪ್ರಸ್ತುತದಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಹೊಂದಿರುತ್ತದೆ.

1. ವಾರ್ಷಿಕ 150 ಎಬಿಬಿಸ್ ಪದವಿ ಕೋರ್ಸ್‌ಗಳನ್ನು ಹಾಗೂ ಹಲವು ವಿಭಾಗಗಳಲ್ಲಿ MD/MS ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು, ವಾರ್ಷಿಕ 100 ಬಿ.ಎಸ್ಸಿ ನರ್ಸಿಂಗ್ ಸೀಟುಗಳನ್ನು ಹಾಗೂ ಅರೆವೈದ್ಯಕೀಯ ಮತ್ತು ಪ್ಯಾರಾಮೆಡಿಕಲ್ ಸೌಲಭ್ಯಗಳನ್ನು ಹೊಂದಿರುತ್ತದೆ.
2. 24X7 ತುರ್ತು ಚಿಕಿತ್ಸೆ ಹಾಗೂ ಐ.ಸಿ.ಯು ವೈದ್ಯಕೀಯ ಶಸ್ತ್ರ ಚಿಕಿತ್ಸಾ ಸೌಲಭ್ಯಗಳು ಹಾಗೂ 24X7 ಸಹಾಯವಾಣಿ - ಜಿಲ್ಲಾ ಬೋಧಕ ಆಸ್ಪತ್ರೆಯ ದೂರವಾಣಿ ಸಂಖ್ಯೆ:9036282877 ಮತ್ತು ಎಂ.ಸಿ.ಹೆಚ್ ದೂರವಾಣಿ ಸಂಖ್ಯೆ -7338077410
3. ಪ್ರತಿನಿತ್ಯ ತಜ್ಞವೈದ್ಯರ ವಿಭಾಗಗಳಿಂದ ಸರಿಸುಮಾರು 800-1000 ಹೊರರೋಗಿಗಳ ತಪಾಸಣೆ
4. ಪ್ರತಿನಿತ್ಯ ತಜ್ಞವೈದ್ಯರ ವಿಭಾಗಗಳಿಂದ ಸರಿಸುಮಾರು 100 ಕ್ಕಿಂತ ಹೆಚ್ಚು ಒಳರೋಗಿಗಳ ದಾಖಲಾತಿ.
5. ಸುಸಜ್ಜಿತ ರಕ್ತ/ಮೂತ್ರ/ಕಫ ತಪಾಸಣಾ ಪ್ರಯೋಗಾಲಯಗಳು : ಪ್ರತಿ ತಿಂಗಳು ಸರಾಸರಿ Pathology Lab:11000, Biochemistry: 42000, Microbiology: 5000 ಮಾದರಿಗಳನ್ನು ಪರೀಕ್ಷಿಸಲಾಗುತ್ತಿದೆ.
6. Rediology ವಿಭಾಗದಿಂದ ಪ್ರತಿ ತಿಂಗಳು X-ray: 3000, CT Scans: 900, USG: 1100 ಸೇವೆ ನೀಡಲಾಗುತ್ತಿದೆ.
7. ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ಸರಾಸರಿ 500 ರೋಗಿಗಳಿಗೆ ಹೆರಿಗೆ ಸೇವೆ ನೀಡಲಾಗುತ್ತಿದ್ದು, ಅದರಲ್ಲಿ 300 ಸಿಸೇರಿಯನ್ ಹೆರಿಗೆ ಹಾಗೂ 200 ಸರಳ ಹೆರಿಗೆ ಮಾಡಲಾಗುತ್ತಿದೆ.
8. ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ಸರಾಸರಿ 600 ಕ್ಕೂ ಹೆಚ್ಚು ನವಜಾತ ಶಿಶು ಹಾಗೂ ಚಿಕ್ಕಮಕ್ಕಳ ತೀವ್ರ ನಿಗಾ ಘಟಕದ ಚಿಕಿತ್ಸಾ ಸೌಲಭ್ಯಗಳನ್ನು ನೀಡಲಾಗುತ್ತಿದೆ.
9. ಜಿಲ್ಲಾ ಬೋಧಕ ಆಸ್ಪತ್ರೆಯ ಶಸ್ತ್ರ ಚಿಕಿತ್ಸಾ ವಿಭಾಗದಿಂದ ಪ್ರತಿ ತಿಂಗಳು ಸರಾಸರಿ 400 Major OT ಗಳು, 900 Minor OT ಗಳೊಂದಿಗೆ ಶಸ್ತ್ರ ಚಿಕಿತ್ಸೆ ಸೇವೆಯನ್ನು ನೀಡಲಾಗುತ್ತಿದೆ.

10. ಜಿಲ್ಲಾ ಬೋಧಕ ಆಸ್ಪತ್ರೆಯ ಸಾಮಾನ್ಯ ವೈದ್ಯಶಾಸ್ತ್ರ ವಿಭಾಗದಿಂದ ಪ್ರತಿ ತಿಂಗಳು ಸರಾಸರಿ 1200 ಒಳರೋಗಿಗಳಿಗೆ ತುರ್ತು ಹಾಗೂ ತಜ್ಞವೈದ್ಯರ ಚಿಕಿತ್ಸೆಯನ್ನು ನೀಡಲಾಗುತ್ತಿದ್ದು, ಸರಾಸರಿ 200 ರೋಗಿಗಳಿಗೆ ತೀವ್ರ ನಿಗಾ ಘಟಕದ ಸೇವೆಯನ್ನು ನೀಡಲಾಗುತ್ತಿದೆ.
11. ಪ್ರತಿ ತಿಂಗಳು ಸರಾಸರಿ 450-500 ಸೈಕಲ್ ಡಯಾಲಿಸಿಸ್ ಸೇವೆಯನ್ನು ನೀಡಲಾಗುತ್ತಿದೆ.
12. ALS ಆಂಬುಲೆನ್ಸ್ ಸೌಲಭ್ಯವಿರುತ್ತದೆ.
13. ABARK ಪರಿಮಿತಿಯಲ್ಲಿ ಸರಿಸುಮಾರು 517 ಚಿಕಿತ್ಸಾ ವಿಧಾನಗಳು ಲಭ್ಯ.
14. SC/ST ರೋಗಿಗಳಿಗೆ ಸಂಪೂರ್ಣ ಉಚಿತ ಚಿಕಿತ್ಸೆ ಸೌಲಭ್ಯಗಳು.
15. ಸಾಂಕ್ರಾಮಿಕ ರೋಗಗಳ ಪತ್ತೆಗೆ VRDL ಜಿಲ್ಲಾ ಕೇಂದ್ರ ಪ್ರಯೋಗಾಲಯ.
16. AIISH ಮೈಸೂರು ಇವರ ಸಹಯೋಗದಲ್ಲಿ - Hearing and Speech Therepy.

ಮೇಲ್ಕಂಡ ಸೌಲಭ್ಯಗಳೊಂದಿಗೆ ಈಗಾಗಲೇ ಆಸ್ಪತ್ರೆಯು ಕಾರ್ಯನಿರ್ವಹಿಸುತ್ತಿದ್ದು, ಇದಲ್ಲದೇ 450 ಹಾಸಿಗೆ ಸಾಮರ್ಥ್ಯದ ಜಿಲ್ಲಾ ಬೋಧಕ ಆಸ್ಪತ್ರೆಯನ್ನು ಪ್ರಾರಂಭಿಸಲು ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.

ನೂತನ 450 ಹಾಸಿಗೆ ಸಾಮರ್ಥ್ಯದ ಕೊಪ್ಪಳ ಜಿಲ್ಲಾ ಬೋಧಕ ಆಸ್ಪತ್ರೆ ಕಟ್ಟಡ ಸ್ವಾಧೀನ ಪಡೆಯುವ ಪೂರ್ವದಲ್ಲಿ ಮೂರನೇ ಪಕ್ಷಕಾರರ(Third Party) ವರದಿಗಾಗಿ ಪ್ರಾಂಶುಪಾಲರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ತಳಕಲ್ ತಾ|| ಕುಕನೂರು ಜಿ|| ಕೊಪ್ಪಳ ಇವರಿಗೆ ದಿನಾಂಕ:02.01.2025 ಮತ್ತು 06.08.2025ರಂದು ಪತ್ರ ಬರೆಯಲಾಗಿದ್ದು, 10 ದಿನಗಳೊಳಗಾಗಿ ಮೂರನೇ ಪಕ್ಷಕಾರರಿಂದ ವರದಿ ನೀಡುವುದಾಗಿ ತಿಳಿಸಿರುತ್ತಾರೆ. ಸದರಿಯವರಿಂದ ಮೂರನೇ ಪಕ್ಷಕಾರರಿಂದ ವರದಿ ಬಂದ ಕೂಡಲೇ ಕಟ್ಟಡದ ಸ್ವಾಧೀನ ಪಡೆಯಲಾಗುವುದು.

ನೂತನ 450 ಹಾಸಿಗೆ ಸಾಮರ್ಥ್ಯದ ಕೊಪ್ಪಳ ಜಿಲ್ಲಾ ಬೋಧಕ ಆಸ್ಪತ್ರೆಯ ವೈದ್ಯಕೀಯ ಉಪಕರಣಗಳು ಹಾಗೂ ಪೀಠೋಪಕರಣಗಳ ಖರೀದಿಗಾಗಿ ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 213 ಎಂಎಸ್ಎಫ್ 2024, ದಿನಾಂಕ:15.07.2025ರಲ್ಲಿ ರೂ.3362.75 ಲಕ್ಷಗಳ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಹಾಗೂ ಸದರಿ ಉಪಕರಣಗಳು ಹಾಗೂ ಪೀಠೋಪಕರಣಗಳನ್ನು ಸರಬರಾಜು ಮಾಡುವಂತೆ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಸಂಸ್ಥೆಯವರು ಕೋರಿದ್ದು, ಸದರಿಯವರ ಕಾರ್ಯಾಲಯದಲ್ಲಿ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

ನೂತನ 450 ಹಾಸಿಗೆ ಸಾಮರ್ಥ್ಯದ ಜಿಲ್ಲಾ ಬೋಧಕ ಆಸ್ಪತ್ರೆಗೆ ಸಂಬಂಧಿಸಿದಂತೆ 389 ಬೋಧಕೇತರ ಸಿಬ್ಬಂದಿಗಳ ಸೃಜನೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ.

ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಕೊಪ್ಪಳದ ನೂತನ 450 ಹಾಸಿಗೆ ಸಾಮರ್ಥ್ಯದ ಜಿಲ್ಲಾ ಬೋಧಕ ಆಸ್ಪತ್ರೆಯ ಉದ್ಘಾಟನೆಗೆ ಸಂಬಂಧಿಸಿದಂತೆ, ಕಾಮಗಾರಿ ವಿವರಗಳನ್ನು ಈಗಾಗಲೇ ಜಿಲ್ಲಾಧಿಕಾರಿಗಳು, ಕೊಪ್ಪಳ ಇವರಿಗೆ ಮಾಹಿತಿಯನ್ನು ಸಲ್ಲಿಸಿದ್ದು, ಉದ್ಘಾಟನೆಗೆ ಸಂಬಂಧಿಸಿದಂತೆ ಜಿಲ್ಲಾಡಳಿತ ಕೊಪ್ಪಳ ಇವರೊಂದಿಗೆ ಸಂಪರ್ಕದಲ್ಲಿದ್ದು, ಸದರಿ ನೂತನ 450 ಹಾಸಿಗೆ ಸಾಮರ್ಥ್ಯದ ಜಿಲ್ಲಾ ಬೋಧಕ ಆಸ್ಪತ್ರೆಯನ್ನು ಶೀಘ್ರವಾಗಿ ಪ್ರಾರಂಭಿಸಲಾಗುವುದು.

ಸಂಖ್ಯೆ:ಎಂಇಡಿ 646 ಎಂಪಿಎಸ್ 2025

(ಡಾ|| ಶರಣಪ್ರಕಾಶ ಆರ್. ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು